ಇ) ಪ್ರಾಥಮಿಕ ನೇಕಾರರ ಸೇವಾ ಸಹಕಾರಿ ಸಂಘಗಳಲ್ಲಿ ದಾಸ್ತಾನು ಇರುವುದನ್ನು ಗಮನಿಸಲಾಗಿದೆ. ಸರ್ವೇಸಾಮಾನ್ಯವಾಗಿ ಡಿಸೆಂಬರ್ ಮತ್ತು ಜನವರಿ ವೇಳೆಯಲ್ಲಿ ಕೈಮಗ್ಗ ಉತ್ಪನ್ನಗಳ ಮಾರಾಟ (off season) ಕ್ಷೀಣವಾಗಿರುತ್ತದೆ. ಕಾರಣ ಸಹಜವಾಗಿ ಪ್ರಾಥಮಿಕ ನೇಕಾರರ ಸೇವಾ ಸಹಕಾರಿ ಸಂಘಗಳಲ್ಲಿ ದಾಸ್ತಾನು ಜಾಸ್ತಿಯಾಗಿರುತ್ತದೆ. ಫೆಬ್ರವರಿ ತಿಂಗಳ ನಂತರ ಮಾರಾಟದ ಸನ್ನಿವೇಶ ಉತ್ತಮಗೊಳ್ಳುವ ಸಾಧ್ಯತೆ ಸಾಮಾನ್ಯವಾಗಿರುತ್ತದೆ.

ಈ) ಈ ಮೇಲಿನ ಸಮಸ್ಯೆಗಳನ್ನು ಸರ್ಕಾರ ಈಗಾಗಲೇ ಮನಗಂಡಿದ್ದು, ಸರ್ಕಾರ ಕೇಂದ್ರ ಪುರಸ್ಕೃತ ದೀನ್ ದಯಾಳ್ ಹತ್ ಕರ್ಘಾ ಪ್ರೋತ್ಸಾಹ ಯೋಜನೆಯಡಿ ಜಿಲ್ಲೆಯ ಎಲ್ಲಾ ನೇಕಾರರ ಸೇವಾ ಸಹಕಾರಿ ಸಂಘಗಳಿಗೆ ಕೈಮಗ್ಗ ಉತ್ಪನ್ನಗಳ ದಾಸ್ತಾನು ವಿಲೇವಾರಿಗೆ ಸಹಕಾರಿಯಾಗುವಂತೆ ಮಾರುಕಟ್ಟೆ ಪ್ರೋತ್ಸಾಹ ಧನವಾಗಿ ನೀಡಲಾಗುತ್ತದೆ. ಅಲ್ಲದೆ ಪ್ರಾಥಮಿಕ ನೇಕಾರರ ಸೇವಾ ಸಹಕಾರಿ ಸಂಘಗಳಲ್ಲಿ ತಯಾರಾದ ಉತ್ಪನ್ನಗಳ ಮಾರಾಟ ಮಾಡಲು ರಾಷ್ಟ್ರೀಯ ಕೈಮಗ್ಗ ಮಾರಾಟ ಮೇಳ ಜಿಲ್ಲಾ ವಸ್ತು ಪ್ರದರ್ಶನ ಮತ್ತು ಮಾರಾಟ ಮೇಳಗಳಲ್ಲಿ ಭಾಗವಹಿಸಲು ಪ್ರೋತ್ಸಾಹಿಸಲಾಗಿದೆ.

ಬರಗಾಲ ಪೀಡಿತ ಪ್ರದೇಶಗಳಲ್ಲಿ ಮೇವಿನ ಕೊರತೆ

422(661) ಶ್ರೀ ಸಂಪಂಗಿ ಎನ್. (ಬಾಗೇಪಲ್ಲಿ) ಮಾನ್ಯ ಕಂದಾಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬರಗಾಲ ಪೀಡಿತ ಪ್ರದೇಶಗಳಲ್ಲಿ ಗೋವುಗಳಿಗೆ ಮೇವು ಇಲ್ಲದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಬಂದಿದ್ದಲ್ಲಿ, ಕೈಗೊಂಡಿರುವ ಕ್ರಮ ಏನು; ಎಷ್ಟು ಹಣ ಖರ್ಚು ಮಾಡಲಾಗಿದೆ.

ಶ್ರೀ ಮಲ್ಲಿಕಾರ್ಜುನ ನಾಗಪ್ಪ ಎಂ. (ಕಂದಾಯ ರಾಜ್ಯ ಸಚಿವರು)

ಅ) ಹೌದು, ಪ್ರಕೃತಿ ವಿಕೋಪ ಪರಿಹಾರ ನಿಧಿಯಿಂದ ಮೇವು ಸಾಗಾಣಿಕೆ ವೆಚ್ಚವನ್ನು ಭರಿಸಲು ಮಂಜೂರಾತಿ ನೀಡಲಾಗಿದೆ. ಸರ್ಕಾರಿ ಜಮೀನುಗಳಲ್ಲಿ ಮೇವು ಬೆಳೆಸಲು ಅನುದಾನ ಹಾಗೂ ಬಿತ್ತನೆ ಬೀಜಗಳನ್ನು ವಿತರಿಸಲು ಕ್ರಮಕೈಗೊಳ್ಳಲಾಗಿದೆ.

ಪ್ರಕೃತಿ ವಿಕೋಪ ಪರಿಹಾರ ನಿಧಿಯಡಿಯಲ್ಲಿ ಮೇವು ಸರಬರಾಜು : ಖರೀದಿ ಉದ್ದೇಶಕ್ಕಾಗಿ ಜನವರಿ ಅಂತ್ಯದವರೆಗೆ ರೂ. 135.37 ಲಕ್ಷ ಖರ್ಚು ಮಾಡಲಾಗಿದೆ.

ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವುದು

423(453) ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಸಲುವಾಗಿ ಭೂಸ್ವಾಧೀನ ಪ್ರಕ್ರಿಯೆ ಯಾವ ಹಂತದಲ್ಲಿದೆ;

ಆ) ಈ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ವಿಚಾರದಲ್ಲಿ ಈವರೆವಿಗೆ ಕೈಗೊಳ್ಳಲಾಗಿರುವ ಕ್ರಮಗಳ ಪೂರ್ಣ ವಿವರ ನೀಡಿ;

ಇ) ಈ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ವಿಚಾರದಲ್ಲಿ ಬಾಕಿ ಉಳಿದಿರುವ ಕೆಲಸ:ಕ್ರಮಗಳು ಯಾವುವು?

ಶ್ರೀ ಟಿ. ಜಾನ್ (ಮೂಲಸೌಲಭ್ಯ ಅಭಿವೃದ್ಧಿ ಮತ್ತು ನಾಗರೀಕ ವಿಮಾನಯಾನ ರಾಜ್ಯ ಸಚಿವರು)

ಅ) ಮೈಸೂರಿನ ಮಂಡಕಳ್ಳಿ ವಿಮಾನ ನಿಲ್ದಾಣವನ್ನು ಮೇಲ್ದರ್ಜೆಗೇರಿಸುವ ಸಲುವಾಗಿ 474 ಎಕರೆ 17 ಗುಂಟೆ ಜಮೀನನ್ನು ಸ್ವಾಧೀನ ಪಡಿಸಿಕೊಳ್ಳಲು ಕೆ.ಐ.ಎ.ಡಿ ಕಾಯ್ದೆ 1966 ರನ್ವಯ ಕಲಂ. 1(3), 3(1) ಮತ್ತು 28(1)ರ ಪ್ರಾರಂಭಿಕ ಅಧಿಸೂಚನೆಯನ್ನು ದಿನಾಂಕ 11.1.2001ರ ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದೆ. ಜಮೀನಿನ ಜಂಟಿ ಅಳತೆಯು ಸಹ ಪೂರ್ಣಗೊಂಡಿದೆ. ಕಲಂ. 28(4) ರನ್ವಯ ಅಂತಿಮ ಅಧಿಸೂಚನೆಯನ್ನು ಕೆ.ಐ.ಎ.ಡಿ.ಬಿ. ಯಿಂದ ನಿರೀಕ್ಷಿಸಲಾಗಿದೆ.

ಆ) ಪ್ರಸ್ತುತ ವಿಮಾನ ನಿಲ್ದಾಣದ ಪಶ್ಚಿಮ ದಿಕ್ಕಿಗೆ : (9:27ರ ರನ್‌ವೆಯನ್ನು 2000 ಮೀಟರ್‌ಗೆ ಉದ್ದ ಮಾಡಲು 26 ಎಕರೆ 11 ಗುಂಟೆ ಹೆಚ್ಚುವರಿ ಜಮೀನನ್ನು ಮೈಸೂರು ಜಿಲ್ಲಾಧಿಕಾರಿಗಳು ಗುರುತಿಸಿದ್ದಾರೆ. ಈ ವಿಷಯವನ್ನು ಭಾರತೀಯ ವೈಮಾನಿಕ ಪ್ರಾಧಿಕಾರದೊಂದಿಗೆ ಕೈಗೆತ್ತಿಕೊಳ್ಳಲಾಗಿದೆ.

ಇ) ಜಮೀನಿನ ಸೂಕ್ತತೆಯ ಬಗ್ಗೆ ನಿರ್ಧರಿಸಲು ಭಾರತೀಯ ವೈಮಾನಿಕ ಪ್ರಾಧಿಕಾರದ ತಾಂತ್ರಿಕ ತಂಡವು ಇಷ್ಟರೊಳಗೆ ಮೈಸೂರಿಗೆ ಭೇಟಿ ನೀಡಲಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗಗಳ ವಿದ್ಯಾರ್ಥಿಗಳಿಗೆ ಸ್ಕಾಲರ್‌ಶಿಪ್

426(352) ಶ್ರೀ ಎನ್.ಹೆಚ್. ಶಿವಶಂಕರರೆಡ್ಡಿ (ಗೌರಿಬಿದನೂರು) ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಕಳೆದ ಮೂರು ವರ್ಷಗಳಿಂದ ಗೌರಿಬಿದನೂರು ತಾಲ್ಲೂಕಿನ ಬಡ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಸ್ಕಾಲರ್‌ಶಿಪ್ ಪಡೆದಿರುವ ವಿದ್ಯಾರ್ಥಿಗಳ ಸಂಖ್ಯೆ ಎಷ್ಟು (ವಿವರ ಒದಗಿಸುವುದು)?

ಆ) ಈ ವಿದ್ಯಾರ್ಥಿಗಳಿಗೆ ಸರ್ಕಾರದ ವತಿಯಿಂದ ಸ್ಕಾಲರ್‌ಶಿಪ್ ನೀಡುವಲ್ಲಿ, ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಈ ವಿಳಂಬಕ್ಕೆ ಕಾರಣರಾದ ಅಧಿಕಾರಿಗಳ ವಿರುದ್ಧ ಕೈಗೊಳ್ಳುವ ಕ್ರಮವೇನು?

ಇ) ಈ ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸಕ್ಕಾಗಿ ಸಕಾಲದಲ್ಲಿ ಸ್ಕಾಲರ್‌ಶಿಪ್ ದೊರಕುವಂತೆ ಮಾಡಲು ಕೈಗೊಳ್ಳುವ ಕ್ರಮವೇನು?

ಶ್ರೀ ಎ. ಕೃಷ್ಣಪ್ಪ (ಸಮಾಜ ಕಲ್ಯಾಣ ಸಚಿವರು)

ಪರಿಶಿಷ್ಟ ಜಾತಿ

1999-2000	2000-01	2001-02
11109	10718	9352

ಪರಿಶಿಷ್ಟ ವರ್ಗ

1999-2000	2000-01	2001-02
7328	5633	5466

ಅ) ಇಲ್ಲ

ಪ್ರಶ್ನೆ ಉದ್ಭವಿಸುವುದಿಲ್ಲ.